| ರಿಜಿಸ್ಟ್ರನ ಇನಿಷಿ ನಂಬರ್. | ಕಕ್ಷಿಗಾರ ಹೆಸರು. | | ತಂಸೊಕೆನ ತಾರೀಖು. | ರಿಜಿಸ್ಟ್ರಿಗೆ ಬಾಡದಾಸಿ ಇದ ತಾರೀಖು. | ರಿಜಿಸ್ಟ್ರಿದ ತಾರೀಖು. | ಸ್ವಭಾವ. |
|---|---|---|---|---|---|---|
| | ಬರದುಕೊಟ್ಟವರ ಹೆಸರು. | ಬರಸಿಕೊಂಡವರ ಹೆಸರು. | | | | |
| 1885—86ನೇ ಇಸವಿ 82ನೇ ನಂಬರು. | ಹೆರೇಸಂದ್ರದಲ್ಲಿ ಇರುವ ಜಂಗಮನಕೊಟ್ಟಿ ಸಿಂಕಪ್ಪರಾಜು ಮಗ ಸುಬ್ಬರಾಜು. | ಹೆರೇಸಂದ್ರದಲ್ಲಿ ಇರುವ ಪಿಪ್ಪುನಾಯಕನ ಕೊಡಗನಾರ ನಾಯಕ್ಕ. | 1885ನೇ ಇಸವಿ ಜೂಲೈ ತಾರೀಖು 24. | 1885ನೇ ಇಸವಿ ಜೂಲೈ ತಾರೀಖು 26. | 1885ನೇ ಇಸವಿ ಜೂಲೈ ತಾರೀಖು 26. | ಹೆರೇಸಂದ್ರ ಗ್ರಾಮದ ಬಳೀ ಪೂರ್ವ ಕಡೆ ಗೋವಿಂದಪ್ಪನ ತೋಪಿನ ಹತ್ತಿರ ಇರುವ ಬರ ಮುಕೊಟ್ಟಿನ ನೈಂಜ ಹದಿನಾಲ್ಕರ ಸರ್ವೇ 73ನೇ ನಂಬರು ತರೀ ಜಮೀನ್ ೧-೩೫ ಗುಂಟೆ ಜಮೀನನ್ನು 20 ರೂಪಾಯಿಗಳಿಗೆ ಕ್ರಯಕ್ಕೆ ಕೊಟ್ಟು ಇರುವದಾಗಿ. |

ಸಿ. ಸುಬ್ಬರಾವ್,
ರಿಜಿಸ್ಟ್ರಾರ್.

---

## ನಗರ ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟ್‌ನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 87.

ಮೃತಪಟ್ಟ ಶೇಕದಾರ್ ಸುಬ್ಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕೃಷ್ಣಪ್ಪನು, ಮೃತಪಟ್ಟ ಸದರೀ ಸುಬ್ಬರಾಯರಿಗೆ ಸಹೋದರನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೋಲಾರ ಡಿಸ್ಟ್ರಿಕ್ಟು ಮುಳಬಾಗಲ ತಾಲ್ಲೂಕು ಮಣಿಕೆನಹಳ್ಳಿ ಸ್ಥಳದ ಕೃಷ್ಣಪ್ಪನು ಸಾಗರ ತಾಲ್ಲೂಕು ಕಲ್ಲಹಳ್ಳಿ ವಾಸಸ್ಥನಾಗಿ ಮೃತಪಟ್ಟ ಸುಬ್ಬರಾಯನ ಜಿಂದಗೀ ಬಗ್ಯಾಗಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಇರುವ ರೂಪಾಯಿ 575—5—10 ತೆಗದು ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕೃಷ್ಣಪ್ಪನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಸೆಪ್ಟೆಂಬರ್ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ ಜಡ್ಜ.

---

## ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 25ನೇ ಆಗಸ್ಟು 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ರ 1887ನೇ ಇಸವಿ ಅಕ್ಟೋಬರ್ ಗುರ್ಸೇ ಲಾಗಾಯಿತು 1888ನೇ ಇಸವಿ ಜೂನ್ 15ನೇ ತಾರೀಖುವರಿಗೆ ಸುಮಾರು 200 ಯಕರೆ ಜಂಗಲೀಯನ್ನು ಕ್ಲಿಯರ್‌ಮಾಡಿಸಿ 18, ಅಂಗುಲ ಲಾಂಬಿ 18, ಅಂಗುಲ ರುಂದೀ 18, ಅಂಗುಲ ಮಟ್ಟುವಾದ (200000) ಯರಡು ಲಕ್ಷ ಗುಣಿಗಳನ್ನು ತೆಗಿಯುತಕ್ಕ ಬಗ್ಯೆ ಈ ತಾರೀಖು ಲಾಗಾಯಿತು (1887ನೇ ಇಸವಿ) ಅಕ್ಟೋಬರ್ 15ನೇ ತಾರೀಖುವರಿಗೆ ಟೆಂಡರುಗಳು ಅಂಗೀಕರಿಸಲ್ಪಡುತದೆ.